ಶ-72 - 126

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಟಿ. ಶ್ರೀಕಂಠೇಗೌಡ ಇವರು 72 ರ ನಿಯಮದ ಮೇರೆಗೆ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಹೇಳಿಕೆ

### ಸೂಚನೆ:

"ಕಂದಾಯ ಇಲಾಖೆಯ ಆದೇಶ ಸಂಖ್ಯೆ: ಕಂಇ/85/ಭೂದಾಸ/2018, ದಿನಾಂಕ: 12/11/2021 ರ ಆದೇಶದಲ್ಲಿ ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ 108 ರಡಿ ಕೃಷಿ ಉದ್ದೇಶಕ್ಕಾಗಿ ಬಳಸಲಾಗುವ ಭೂಮಿಯನ್ನು ಒಳಗೊಂಡ ಸರ್ವೆ ನಂ. ನ ಕನಿಷ್ಟ ವಿಸ್ತೀರ್ಣವನ್ನು ರಾಜ್ಯದ ಕೊಡಗು, ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರಕನ್ನಡ ಜಿಲ್ಲೆಗಳಲ್ಲಿ 3 ಗುಂಟೆ ಇನ್ನುಳಿದ ಜಿಲ್ಲೆಗಳಲ್ಲಿ 5 ಗುಂಟೆಗೆ ನಿಗಧಿಪಡಿಸಿ ಆದೇಶ ನೀಡಿದ್ದು, ಇದರಿಂದ ರಾಜ್ಯದಲ್ಲಿನ ಸಣ್ಣ ಹಿಡುವಳಿ ಜಮೀನು ಹೊಂದಿರುವ (ಉದಾ: 5 ಗುಂಟೆ – 10 ಗುಂಟೆ) ರೈತರುಗಳು ತಮ್ಮ ಚಿಕ್ಕ ಹಿಡುವಳಿ ಜಮೀನುಗಳನ್ನು ತಮ್ಮ ಕುಟುಂಬದಲ್ಲಿ ವಿಭಾಗ ಮಾಡಿಕೊಳ್ಳಲು ಹಾಗೂ ತಮ್ಮ ಅವಶ್ಯಕತೆಗಾಗಿ ಬೇರೆಯವರಿಗೆ ಮಾರಾಟ ಮಾಡಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ, ಈ ಆದೇಶವನ್ನು ವಾಪಸ್ಸು ಪಡೆಯಬೇಕೆಂಬ ಕುರಿತು"

### ಹೇಳಿಕೆ

ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಕಲಂ 108 ರಡಿ ಕೃಷಿ ಉದ್ದೇಶಕ್ಕಾಗಿ ಬಳಸಲಾಗುವ ಭೂಮಿಯನ್ನು ಒಳಗೊಂಡಿರುವ ಸರ್ವೆ ನಂಬರು, ಕಾಲಕಾಲಕ್ಕೆ ರಾಜ್ಯ ಸರ್ಕಾರದ ಮಂಜೂರಾತಿಯನ್ನು ಪಡೆದು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ನಿರ್ದೇಶಕರು (ಆಯುಕ್ತರು) ಪ್ರತಿಯೊಂದು ಜಿಲ್ಲೆಯಲ್ಲಿನ ವಿವಿಧ ವರ್ಗದ ಭೂಮಿಗಳಾಗಿ ಗೊತ್ತುಪಡಿಸುವ ಕನಿಷ್ಟ ವಿಸ್ತೀರ್ಣಕ್ಕಿಂತ ಕಡಿಮೆ ಇರತಕ್ಕದ್ದಲ್ಲ ಎಂದು ನಿರ್ದಿಷ್ಟಪಡಿಸಲಾಗಿದೆ.

ಮುಂದುವರಿದು, ರಾಜ್ಯಾದ್ಯಂತ ಕೃಷಿ ಭೂಮಿಯನ್ನು ತುಂಡು ತುಂಡು ಮಾಡಿ ಮಾರಾಟ ಮಾಡುತ್ತಿರುವುದು ಕಂಡುಬಂದಿದ್ದು, ಈ ರೀತಿ ಮಾರಾಟ ಮಾಡಲಾದ ಭೂಮಿಗಳನ್ನು ಕೃಷಿ ಉದ್ದೇಶಕ್ಕೆ ಬಳಸುವ ಬದಲು ನಿವೇಶನಗಳನ್ನಾಗಿ ಬಳಸಲಾಗುತ್ತಿದೆ. ಇಂತಹ ಪ್ರವೃತ್ತಿಯು ನಗರ ಪ್ರದೇಶಗಳ ಸುತ್ತ ಮುತ್ತ ಹೆಚ್ಚಾಗಿ ನಡೆಯುತ್ತಿದ್ದು, ಈ ರೀತಿಯ ವಹಿವಾಟುಗಳಿಂದ ಕ್ರಮಬದ್ಧವಾದ ನಗರೀಕರಣ ಸಾಧ್ಯವಾಗದೇ ಅವಶ್ಯಕ ಮೂಲಭೂತ ಸೌಕರ್ಯಗಳಾದ ರಸ್ತೆ, ಒಳಚರಂಡಿ, ನೀರು ಇತ್ಯಾದಿಗಳನ್ನು ಪೂರೈಸಲು ಕಷ್ಟಕರವಾಗುತ್ತದೆ. ಈ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರದ ಪತ್ರ ಸಂಖ್ಯೆ: ಕಂಇ/85/ಭೂದಾಸ/2018, ದಿನಾಂಕ: 12/11/2021 ರಂತೆ ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಕಲಂ 108 ರಡಿ ಕೃಷಿ ಉದ್ದೇಶಕ್ಕಾಗಿ ಬಳಸಲಾಗುವ ಭೂಮಿಯನ್ನು ಒಳಗೊಂಡಿರುವ ಸರ್ವೆ ನಂಬರಿನ (ಹಿಸ್ಸಾ ಸರ್ವೆನಂಬರ್ ಗಳನ್ನೊಳಗೊಂಡು) ಕನಿಷ್ಟ ವಿಸ್ತೀರ್ಣವನ್ನು ರಾಜ್ಯದ ಕೊಡಗು ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ 3 ಗುಂಟೆ ಇನ್ನುಳಿದ ಜಿಲ್ಲೆಗಳಲ್ಲಿ 5 ಗುಂಟೆಗೆ ನಿಗಧಿಪಡಿಸಲು ಆಯುಕ್ತರು,

ಭೂಮಾಪನ ಇಲಾಖೆ ಇವರಿಗೆ ಅನುಮತಿಸಲಾಗಿರುತ್ತದೆ. ಸದರಿ ಪತ್ರದಲ್ಲಿ ಈಗಾಗಲೇ ಅಸ್ತಿತ್ವದಲ್ಲಿರುವ ಸರ್ವೆ ನಂಬರ್ ಹಾಗೂ ಪಹಣಿಗಳಲ್ಲಿ ಕನಿಷ್ಟ ವಿಸ್ತೀರ್ಣಕ್ಕಿಂತ ಕಡಿಮೆ ಇದ್ದಲ್ಲಿ ಅವುಗಳು ಹಾಗೆಯೇ ಮುಂದುವರಿಸಲು ಹಾಗೂ ಈ ನಿರ್ಬಂಧವನ್ನು ಭವಿಷ್ಯಾವರ್ತಿಯಾಗಿ ಜಾರಿಗೆ ತರುವಂತೆ ನಿರ್ದೇಶನ ನೀಡಲಾಗಿತ್ತು.

ಸದರಿ ನಿರ್ದೇಶನದ ಮೇಲೆ ಆಯುಕ್ತರು, ಭೂಮಾಪನ ಇಲಾಖೆ ಇವರು ದಿನಾಂಕ:07-12-2021 ರಂದು ಹೊರಡಿಸಿರುವ ಆದೇಶದಂತೆ ಈ ಆದೇಶವು ಈಗಾಗಲೇ ಅಸ್ತಿತ್ವದಲ್ಲಿರುವ ಸರ್ವೆ ನಂಬರುಗಳು ಹೊಸ ಆದೇಶದಲ್ಲಿ ಸೂಚಿಸಲಾದ ಕನಿಷ್ಟ ವಿಸ್ತೀರ್ಣಕ್ಕಿಂತ ಕಡಿಮೆ ಇದ್ದರೂ ಸಹ ಅದಕ್ಕೆ ಅನ್ವಯಿಸುವುದಿಲ್ಲ. ಇದಲ್ಲದೇ, ಸದರಿ ಆದೇಶವು ಕುಟುಂಬದೊಳಗೆ ಅನುವಂಶಿಕತೆ ಅಥವಾ ಉತ್ತರಾಧಿಕಾರವನ್ನು ನಿಗದಿಪಡಿಸಲು ಇನ್ನೂ ಸಣ್ಣ ಪ್ರಮಾಣದಲ್ಲಿ ಜಮೀನನ್ನು ವಿಭಜನೆ ಮಾಡುವುದನ್ನು ನಿರ್ಬಂಧಿಸುವುದಿಲ್ಲ. ಪ್ರಸ್ತುತ ಜಂಟಿ ಅಥವಾ ಬಹುಮಾಲೀಕತ್ವ ಹೊಂದಿರುವ ಜಮೀನಿನ ಪಹಣಿಗಳನ್ನು ಅಸ್ತಿತ್ವದಲ್ಲಿರುವ ಹಕ್ಕಿನ ಅನುಸಾರ ವಿಭಜಿಸಬಹುದಾಗಿದೆ.

ಈ ಕುರಿತು ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ ರವರ ಆದೇಶ ಸಂಖ್ಯೆ: ಎಸ್‌ಎಸ್‌ಎಲ್‌ಆರ್/ಪಿಎಂಯು/2020-21, ದಿನಾಂಕ:07-12-2021 ನ್ನು ಮಾಹಿತಿಗಾಗಿ ನೀಡಲಾಗಿದೆ.

ಆದ್ದರಿಂದ ಹೊಸ ಆದೇಶವು ಕರ್ನಾಟಕ ಭೂಕಂದಾಯ ಅಧಿನಿಯಮ, 1964 ಮತ್ತು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯಿದೆಗಳ ಉಲ್ಲಂಘನೆಯನ್ನು ತಡೆಗಟ್ಟಲು ಹಾಗೂ ವಸತಿ ಪ್ರದೇಶಗಳ ಯೋಜನಾ ಅಭಿವೃದ್ಧಿ ಮತ್ತು ಕೃಷಿಯ ರಕ್ಷಣೆಗಾಗಿ ಅವಶ್ಯಕವಾಗಿದೆ.

(ಆರ್. ಅಶೋಕ)
ಕಂದಾಯ ಸಚಿವರು

<u>ಸಂಖ್ಯೆ: ಕಂಇ 222 ಎಸ್.ಎಸ್.ಸಿ 2021</u>